ಓದುವ ಅಭಿರುಚಿ ಬೆಳೆಸುವ

ಸಾಹಿತ್ಯ ಮಂಟಪ

೫

– ಧ್ವನಿ ಫೋಟೋ ಸರಸ್ವತಿ ಮೊಕಾಶಿ

ಇಲ್ಲಿನ ಕಥೆ, ಕವನ
ಮುಂತಾದ ಸಾಹಿತ್ಯವನ್ನು
ನೀವೂ ಓದಿರಿ;
ಬೇರೆಯವರಿಗೂ ಓದಿ ಹೇಳಿರಿ.

ನವೆಂಬರ್ – ಡಿಸೆಂಬರ್ ೨೦೨೪–೨೫

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಪೂರಣ ಯೋಜನೆ
Poorana 2024-25 Project
is Supported by Many
Individual Donors

ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಸ್ವರಚಿತ ಕಥೆ – ಕವನಗಳು, ಮೂಲ ಇಂಗ್ಲೀಷ್ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ನಮ್ಮ ನಮ್ಮ ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಸದಾಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚು ಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

– ಧ್ವನಿ ಬಳಗ

ಈ ಸಲದ

ಸಾಹಿತ್ಯ ಮಂಟಪದಲ್ಲಿ....

* ಲಂಕಾದಹನ – ಶಂ. ಗು. ಬಿರಾದಾರ - ೪

* ಸಹನೆಯೇ ಗೆಲುವಿನ ದಾರಿ
– ಅಂತರ್ಜಾಲ - ೧೩

* ಬಡಗಿಗಳೂ ಆನೆಯೂ
– ದೇವುಡು ನರಸಿಂಹಶಾಸ್ತ್ರಿ - ೧೭

* ಚಾಕೋ ಚಾಕಿ - ಅನು: ಸಂಗಮೇಶ ಎಮ್ - ೨೨

* Chako Chaki - ಅಂತರ್ಜಾಲ - ೨೬

* ಕವನ: ಕಳ್ಳ ಬೆಕ್ಕು - ನೀ. ರೇ. ಹಿರೇಮಠ - ೩೧

ಲಂಕಾದಹನ

– ಶಂ. ಗು. ಬಿರಾದಾರ

“ಅಜ್ಜಾ ಅಜ್ಜಾ ನಿನ್ನ ಕಾಲು ಒತ್ತಲೇ?” ಎಂದು ಮೊಮ್ಮಗ ಗುರುಪ್ರಸಾದ ಹತ್ತಿರ ಬಂದು ಕುಳಿತು ಕೇಳಿದ. “ಯಾಕಪ್ಪ ನಿನಗೇನೋ ಬೇಕಾದಂತೆ ಕಾಣುತ್ತದೆ. ನೀನು ಸುಮ್ಮನೆ ಕಾಲು ಒತ್ತುವವನಲ್ಲ.” ಎಂದೆ ನಾನು.

“ನಾನು ಕಾಲು ಒತ್ತುತ್ತೇನೆ. ನೀನು ಕತೆ ಹೇಳು ಅಜ್ಜ.” ಗುರು ತನ್ನ

ಮನಸ್ಸಿನಲ್ಲಿದ್ದುದನ್ನು ಹೇಳಿಯೇ ಬಿಟ್ಟ. "ನನಗೂ ನಿತ್ಯ ಕಾಲು ಒತ್ತಿಸಿಕೊಳ್ಳುವ ಚಟ. ಆಗಲಿ ಒತ್ತು." ಎಂದು ಕತೆ ಹೇಳಲಾರಂಭಿಸಿದ.

ನಾನು ಚಿಕ್ಕವನಿದ್ದಾಗ ನಾಟಕ ನೋಡುವ ಹಂಬಲ ಬಹಳ. ಅದರಂತೆ ನಾಟಕವಾಡುವ ಬಯಕೆಯೂ ಬೆಳೆದಿತ್ತು. ಅಂದು ರವಿವಾರ ಶಾಲೆಗೆ ಬಿಡುವು. ಮನೆಯವರೆಲ್ಲರೂ ಹೊಲಕ್ಕೆ ಹೋಗಿದ್ದರು. ನಾನೊಬ್ಬನೇ ಮನೆಯಲ್ಲಿದ್ದೆ. ಮಧ್ಯಾಹ್ನ ಗೆಳೆಯರ ದಂಡು ಮನೆಗೆ ಬಂತು. ಕಿಟ್ಟಿ, ಪುಟ್ಟಿ, ಸೋಮ, ಹುಸೇನಿ, ಪಾರು, ಕಾಳ ಎಲ್ಲರೂ ಸೇರಿದರು. ಹಿಂದಿನ ದಿನ ನಮ್ಮ ಗುರುಗಳು ಎಲ್ಲರಿಗೂ 'ಲಂಕಾ ದಹನ' ನಾಟಕ ತೋರಿಸಿದ್ದರು.

ನಾವೂ ಆ ನಾಟಕವಾಡಬೇಕೆಂದು ಮಾತನಾಡಿಕೊಂಡೆವು. ಅಂತೆಯೆ

ಹುಡುಗರೆಲ್ಲರೂ ಹುರುಪಿನಿಂದ ನಮ್ಮ ಮನೆಗೆ ಬಂದಿದ್ದರು.

ಶಿವು ಊಟದ ತಾಟೊಂದನ್ನು ತೆಗೆದುಕೊಂಡ ಓಣಿಯಲ್ಲಿ ನಿಂತು,“ಕೇಳಿರಿ ಕೇಳಿರಿ ಲಂಕಾದಹನ ನಾಟಕ. ಶಂಕರನ ಮನೆಯ ಹಿತ್ತಿಲಲ್ಲಿ. ಇದೀಗ ಪ್ರಾರಂಭ. ಎಲ್ಲರೂ ಬಂದು ನೋಡಿ ಆನಂದಪಡೆಯಿರಿ.” ಎಂದು ಜೋರಾಗಿ ಕೂಗುತ್ತಾ ತಾಟು ಬಾರಿಸಿದ. ಓಣಿಯ ಹುಡುಗರು ಓಡುತ್ತ ನಮ್ಮ ಮನೆಗೆ ಬಂದರು.

“ನಾನು ರಾಮ.” ಎಂದ ಕಿಟ್ಟಿ. “ಈ ಪುಟ್ಟಿ ಸೀತೆಯಾಗಲಿ.” ಸೋಮ ಹೇಳಿದ. ಪುಟ್ಟಿ ನಾಚುತ್ತಲೇ ಒಪ್ಪಿಕೊಂಡಳು. “ನಾನು ಹನುಮಂತ.” ಎಂದು ಕಿರ್ರನೆ ಹಲ್ಲು ಕಿಸಿದು ಜಿಗಿದು ನಿಂತೆ. ಎಲ್ಲರೂ ನಕ್ಕಿದ್ದೇ ನಕ್ಕಿದ್ದು. “ಅಜ್ಜಾ ನೀನು

ಹನುಮಂತನೇಕಾದೆ." ಗುರು ಮಧ್ಯದಲ್ಲಿ ಪ್ರಶ್ನೆ ಹಾಕಿದ. ನನಗೆ ಮಂಗಗಳಂತೆ ಜಿಗಿದಾಡುವ ಚಪಲ. ಅದಕ್ಕಾಗಿ ಆ ಪಾತ್ರ ಆಯ್ದುಕೊಂಡೆ. ನನ್ನ ಈ ಮಾತಿಗೆ ಗುರು ನಕ್ಕು,"ಹೂಂ ಮುಂದೇನಾಯಿತು." ಎಂದ.

ಉಳಿದ ಪಾತ್ರಗಳನ್ನೆಲ್ಲ ಹಂಚಿಕೊಂಡೆವು. ನಮ್ಮ ಮನೆಯ ಹಿತ್ತಲಿನ ಕಟ್ಟೆಯೇ ರಂಗಮಂಚವಾಯಿತು. ರಾವಣನ ಪಾತ್ರ ಒಪ್ಪಿಕೊಂಡ ಸೋಮ,"ನನಗೆ ಹತ್ತು ತಲೆ ಬೇಕಲ್ಲ!" ಎಂದು ರಾಗ ಎಳೆದ. ಕೂಡಲೇ ಕಿಟ್ಟಿ ಒಂದು ರಟ್ಟನ್ನು ತಂದ ಮುಖದ ಆಕಾರ ಕತ್ತರಿಸಿದ. ಮಸಿಯಿಂದ ಅವುಗಳಿಗೆ ಕಣ್ಣು, ಮೂಗು, ಬಾಯಿ, ಕೂದಲು ಮಾಡಿದ. ಆ ಒಂಭತ್ತು ತಲೆಯ ಕಟ್ಟನ್ನು ಶಿವುನ ಕುತ್ತಿಗೆಗೆ ಕಟ್ಟಿದ.

"ರಾವಣನಿಗೆ ಹತ್ತು ತಲೆಗಳಲ್ಲವೆ? ಅಜ್ಜಾ? ಒಂಬತ್ತು ತಲೆಯ ರಟ್ಟನ್ನೇಕೆ

ಮಾಡಿದ?" ಗುರು ಮತ್ತೆ ಪ್ರಶ್ನೆ ಮಾಡಿದ. "ರಟ್ಟಿಗೆ ಒಂಭತ್ತು ತಲೆ. ಅದನ್ನು ಕಟ್ಟಿಸಿಕೊಳ್ಳುವ ಶಿವೂನಿಗೂ ಒಂದು ತಲೆ ಇಲ್ಲವೇನೋ ಮಂಕೇ?" ಎಂದಾಗ ಗುರುವಿಗೆ ತನ್ನ ತಪ್ಪಿನ ಅರಿವಾಗಿ ಹಿ ಹಿ ಹೀ ಎಂದು ನಕ್ಕ. ನಾನು ಕತೆ ಮುಂದುವರಿಸಿದೆ.

ನಾಟಕ ನೋಡಲು ಓಣಿಯ ಹುಡುಗರೆಲ್ಲ ಸೇರಿದ್ದರು. ಮುಖಕ್ಕೆ ಮಸಿ ಬಳಿದುಕೊಂಡು ಕಿರ್ರನೆ ಹಲ್ಲು ಕಿಸಿಯುತ್ತಿದ್ದ ಮಂಗಗಳ ಪಾತ್ರಗಳ ಕಡೆಗೇ ಅವರ ಲಕ್ಷ್ಯ. ನಾವು ಅಲ್ಲಿದ್ದ ಕಟ್ಟಿಗೆ ದಂಟುಗಳಿಂದ ಸಣ್ಣ ಪುಟ್ಟ ಮನೆಗಳನ್ನು ಮಾಡಿದೆವು. ಅದು ಲಂಕಾಪಟ್ಟಣವಾಯಿತು. ಹನುಮಂತನಾದ ನನಗೆ ಬಾಲಬೇಕಲ್ಲ! ಹೇಗೆ? ಎಂದು ಯೋಚಿಸಿದೆವು.

"ಏ ಒಳಗೆ ನಿಮ್ಮಪ್ಪನ ಧೋತರವಿದೆ ತೆಗೆದುಕೊಂಡು ಬಾ." ಎಂದ

ಕಿಟ್ಟಿ. ನಾನು ಧೋತರ ತಂದುಕೊಟ್ಟೆ. ಅದನ್ನು ಸುರುಳಿ ಮಾಡಿ ಹೊಸೆದು ಬಾಲ ಮಾಡಿದರು. ನನ್ನ ಚೊಣ್ಣದ ಹಿಂಗಡೆ ಜೋತುಬಿಟ್ಟರು. ನಾನು ರಾಮಾ ರಾಮಾ ಎನ್ನುತ್ತ ಜಿಗಿದಾಡಿದೆ. ಮಂಗಗಳ ವೇಶ ಹಾಕಿದ ನಾಲ್ಕಾರು ಹುಡುಗರೂ ನನ್ನ ಸುತ್ತ ಕುಣಿದಾಡಿದರು. ನಾವು ಲಂಕಾ ಪಟ್ಟಣಕ್ಕೆ ನೆಗೆದೆವು.

"ನಿಮ್ಮ ನಾಟಕಕ್ಕೆ ಪೇಟಿ – ತಬಲಾ ಪರದೇ ಇರಲಿಲ್ಲವೇ ಅಜ್ಜಾ?" ಗುರು ಕುತೂಹಲದಿಂದ ಕೇಳಿದ. "ನಾವೆಲ್ಲರೂ ಚಿಕ್ಕ–ಪುಟ್ಟ ಹುಡುಗರು. ನಮಗೆಲ್ಲಿ ಬರಬೇಕು ಪೇಟಿ, ತಬಲಾ, ಒಬ್ಬ ಹುಡುಗ ನಾವು ಕುಣಿಯುವಾಗ ಡಬ್ಬಿ ಬಾರಿಸುತ್ತಿದ್ದ. ಇನ್ನೊಬ್ಬ, ಪೀಪೀಪೀ ಎಂದು ಪೀಪಿ ಊದುತ್ತಿದ್ದ. ನಮ್ಮದು ಹುಡುಗಾಟದ ನಾಟಕ." ಎಂದೆ ನಾನು.

"ಮುಂದೇನಾಯಿತು ಹೇಳು ಅಜ್ಜಾ." ಕತೆಗೆ ಚಾಲನೆ ಕೊಟ್ಟೆ.

ಕೊನೆಗೆ ಲಂಕಾದಹನ ಪ್ರವೇಶ ಬಂತು! ಅಂದರೆ ರಾವಣನ ಲಂಕಾಪಟ್ಟಣ ಸುಡುವ ಪ್ರಸಂಗ, ನನ್ನ ಬಾಲದ ತುದಿಗೆ ಚಿಮಣಿಯಿಂದ ಎಣ್ಣೆ ಸುರಿದರು. ಕಡ್ಡಿಗೀರಿ ಅದಕ್ಕೆ ಬೆಂಕಿ ಹಚ್ಚಿದರು. ನಾನು ಬಾಲ ಎತ್ತಿಕೊಂಡು ಹಾರಾಡಿದೆ. ಅಲ್ಲಿದ್ದ ರಟ್ಟಿನ ಪುಟ್ಟ ಮನೆಗಳಿಗೆ ಬೆಂಕಿ ಹಚ್ಚಿದೆ. "ಅಯ್ಯೊ ನಿಮ್ಮಪ್ಪನ ಧೋತರ ಸುಟ್ಟಿತಲ್ಲೋ." ಎಂದ ಹುಸೇನಿ. ಆಗ ನನಗೆ ಎಚ್ಚರವಾಯಿತು. ಬಾಲಕ್ಕೆ ಹತ್ತಿದ ಬೆಂಕಿಯನ್ನು ಆರಿಸಲು ಹೋಗಿ ಕೈ ಸುಟ್ಟುಕೊಂಡೆ. ಕೊನೆಗೆ ಅಲ್ಲಿಯೇ ಇದ್ದ ಹೌಜಿನಲ್ಲಿ ಬಾಲ ಅದ್ದಿದೆ. ಬೆಂಕಿ ಆರಿಸಿದರೂ ಧೋತರ ಅರ್ಧಮರ್ಧ ಸುಟ್ಟಿತ್ತು. ನಾನು ಪೆಚ್ಚು ಮುಖ ಮಾಡಿಕೊಂಡು ಕುಳಿತೆ. ಹುಡುಗರೆಲ್ಲ

ಒಬ್ಬೊಬ್ಬರೇ ಹೊರಟು ಹೋದರು.

ಸಾಯಂಕಾಲ ತಂದೆ–ತಾಯಿ ಮನೆಗೆ ಬಂದರು. ನಾನು ಪಡಸಾಲೆಯಲ್ಲಿ ಮಲಗಿಕೊಂಡಿದ್ದೆ. ತಾಯಿ ಹತ್ತಿರ ಬಂದು, "ಯಾಕೆ ಮಲಗಿಕೊಂಡೆ?" ಎನ್ನುತ್ತ ಹಣೆಯ ಮೇಲೆ ಕೈಯಾಡಿಸಿದಳು. ನನ್ನ ಮುಖಕ್ಕೆ ಬಳಿದ ಮಸಿ ಅವಳ ಕೈಗೆ ಹತ್ತಿತು. "ಏನಿದು?" ಎನ್ನುತ್ತ ನನ್ನ ಕೈಹಿಡಿದಳು. ನೋವಿನಿಂದ "ಅಮ್ಮಾ." ಎಂದು ರಾಗ ಎಳೆದೆ. ಸುಟ್ಟ ಕೈಗೆ ಗುಳ್ಳೆಗಳಾಗಿದ್ದವು.

ನೆರೆಮನೆಯ ಸೀತೆ ಬಂದು ನಡೆದ ಕತೆ ಹೇಳಿದಳು. ತಂದೆ ಸುಟ್ಟ ಧೋತರ ನೋಡಿ ಸಿಟ್ಟಾದರು. ನನ್ನನ್ನು ಹೊಡೆಯಲೂ ಬಂದರು. ತಾಯಿ ತಡೆದು,"ಪಾಪ ಕೈ ಸುಟ್ಟುಕೊಂಡಿದ್ದಾನೆ. ತಿಳಿಯದೆ ತಪ್ಪು ಮಾಡಿದ್ದಾನೆ." ಎಂದು ಅಪ್ಪನನ್ನು ಸಮಾಧಾನ ಪಡಿಸಿದಳು. ಅಪ್ಪ

ಎಲ್ಲ ಸಮಾಚಾರ ತಿಳಿದುಕೊಂಡ ಮೇಲೆ,“ಅಲ್ಲೋ ಹನುಮಂತನಾಗಲು ಹೋಗಿ ಮಂಗನಾದೆಯಲ್ಲೋ.” ಎಂದು ನಕ್ಕರು.

“ಅಜ್ಜಾ ನಿನ್ನ ಕೈ ಹೇಗೆ ಗುಣವಾಯಿತು?” ಗುರು ಕೇಳಿದ. “ಅಪ್ಪ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಔಷಧಿ ಹಚ್ಚಿಸಿದರು. ಗುಣವಾಗಬೇಕಾದರೆ ಒಂದು ತಿಂಗಳು ಹಿಡಿಯಿತು.” ಎಂದೆ. ಗುರು ಕಾಲು ಒತ್ತುವುದನ್ನು ನಿಲ್ಲಿಸಿದ. ನಾನು ಅವನನ್ನು ಅಪಿಕೊಂಡು ಮುತ್ತು ಕೊಟ್ಟೆ. *

ಮೂಲ: ಅಂತರ್ಜಾಲ

ಮನ ಮಂಥನ:

* ನೀನು ನಿಮ್ಮ ಊರಲ್ಲಿ ಯಾವ ನಾಟಕವನ್ನು ನೋಡಿರುವೆ?
* ನಿನ್ನ ಶಾಲೆ / ಊರಲ್ಲಿನ ನಾಟಕದಲ್ಲಿ ಭಾಗವಹಿಸಿದ್ದರೆ ಅದರ ಅನುಭವವನ್ನು ತರಗತಿಯಲ್ಲಿ ಹಂಚಿಕೊ.

ಸಹನೆಯೇ ಗೆಲುವಿನ ದಾರಿ

ಒಂದು ಸಲ ಶಿವಾಜಿ ಮಹಾರಾಜರು ಒಂದು ಕೋಟೆಯಿಂದ ಮತ್ತೊಂದು ಕೋಟೆಗೆ ಹೋಗುವಾಗ ದಾರಿ ತಪ್ಪಿದರು. ಆಗ ಅವರು ಒಂದು ಬೆಟ್ಟ ಏರಿ ಯಾವುದಾದರೂ ಹಳ್ಳಿ ಇದೆಯಾ ಎಂದು ನೋಡಿದರು. ಆದರೆ ಯಾವ ಹಳ್ಳಿಯೂ ಕಾಣಿಸಲಿಲ್ಲ. ರಾತ್ರಿಯಾಗುತ್ತಿತ್ತು. ಅವರು

ಬೆಟ್ಟ ಇಳಿದು ಬರುವಾಗ ದೂರದಲ್ಲಿ ದೀಪವೊಂದು ಮಿಣುಕುವುದು ಕಾಣಿಸುತ್ತಿತ್ತು. ಅದೇ ದಾರಿಯಲ್ಲಿ ಹೋದಾಗ ಅವರು ಒಂದು ಗುಡಿಸಲಿನ ಬಳಿ ಬಂದರು.

ಗುಡಿಸಲಿನಲ್ಲಿ ಒಬ್ಬ ವೃದ್ಧ ಮಹಿಳೆ ಇದ್ದಳು. ಅವಳು ಮಹಾರಾಜರನ್ನು ಒಬ್ಬ ಸೈನಿಕ ಇರಬೇಕೆಂದು ತಿಳಿದು ಸ್ವಾಗತಿಸಿದಳು. ಅವನು ಹಸಿದಿರುವನೆಂದು ಅರಿತ ಮಹಿಳೆಯು ಕೈ ಕಾಲು ಮುಖ ತೊಳೆಯುಲು ನೀರು ನೀಡಿದಳು. ವಿಶ್ರಮಿಸಲು ಚಾಪೆಯನ್ನು ಹಾಸಿದಳು. ಅವನು ವಿಶ್ರಮಿಸಿದ ನಂತರ ಮಹಿಳೆಯು ಬಿಸಿ ಬಿಸಿ ಅನ್ನ ಮತ್ತು ಸಾಂಬಾರನ್ನು ತಿನ್ನಲು ನೀಡಿದಳು.

ತುಂಬಾ ಹೊಟ್ಟೆ ಹಸಿದಿದ್ದ ಶಿವಾಜಿಯು ತಕ್ಷಣ ತಿನ್ನಲು ಬಿಸಿ ಅನ್ನಕ್ಕೆ ಕೈ ಹಾಕಿದನು. ಬಿಸಿ ತಡೆಯಲಾರದೆ ಚೀರಿದನು

ಮತ್ತು ಸ್ವಲ್ಪ ಅನ್ನವನ್ನು ಚೆಲ್ಲಿದನು. ಇದನ್ನು ನೋಡಿದ ಮಹಿಳೆಯು ಹೇಳಿದಳು,"ಅರೇ, ನೀನು ಸಹ ನಿನ್ನ ಸ್ವಾಮಿ ಶಿವಾಜಿಯಂತೆ ಗಡಿಬಿಡಿ ಮಾಡುತ್ತೀಯ. ಅದಕ್ಕೇ ಕೈ ಸುಟ್ಟುಕೊಂಡೆ ಮತ್ತು ಸ್ವಲ್ಪ ಅನ್ನವನ್ನೂ ಬೀಳಿಸಿದೆ."

ಶಿವಾಜಿಯು ಆಶ್ಚರ್ಯದಿಂದ, "ನನ್ನ ಸ್ವಾಮಿ ಶಿವಾಜಿಯಲ್ಲಿ ತಾಳ್ಮೆ ಇಲ್ಲ ಎಂದು ನೀನು ಯಾಕೆ ಹೇಳುತ್ತೀಯ?" ಎಂದು ಕೇಳಿದನು.

ಆಗ ಮಹಿಳೆಯು ಹೇಳಿದಳು, "ನೋಡು ಮಗನೆ, ಶಿವಾಜಿಯು ತನ್ನ ಗಡಿಬಿಡಿಯಿಂದಾಗಿ ಶತ್ರುಗಳ ಸಣ್ಣ ಕೋಟೆಯನ್ನು ಗೆಲ್ಲುವ ಬದಲಾಗಿ ದೊಡ್ಡ ದೊಡ್ಡ ಕೋಟೆಗಳನ್ನು ಗೆಲ್ಲಲು ಹೋಗುತ್ತಿದ್ದಾನೆ. ಮತ್ತು ಇದರಿಂದಾಗಿ ಅವನು ತನ್ನ ವೀರ ಸೈನಿಕರನ್ನು ಕಳೆದುಕೊಳ್ಳುತ್ತಿದ್ದಾನೆ. ಅದರ ಬದಲಿಗೆ

ತಾಳ್ಮೆಯಿಂದ ಮೊದಲು ಸಣ್ಣ ಸಣ್ಣ ಕೋಟೆಗಳನ್ನು ಗೆದ್ದರೆ ಅವನ ಬಲವೂ ಹೆಚ್ಚುತ್ತದೆ ಮತ್ತು ಸೈನಿಕರೂ ಉಳಿಯುತ್ತಾರೆ. ಅದೇ ರೀತಿ ನೀನು ಮೊದಲು ಬದಿಯಲ್ಲಿರುವ ತಣ್ಣಗಿರುವ ಅನ್ನವನ್ನು ಮೊದಲು ತಿನ್ನು."

ಶಿವಾಜಿಯು ಕೂಡಲೇ ವೃದ್ಧ ಮಹಿಳೆಯ ಮಾತಿನ ಹಿಂದಿರುವ ಅರ್ಥವನ್ನು ಅರಿತನು ಮತ್ತು ಯಾವುದೇ ತೀರ್ಮಾನವನ್ನು ಗಡಿಬಿಡಿಯಲ್ಲಿ ಮಾಡಬಾರದೆಂದು ಅರಿತನು. *

ಮೂಲ: ಅಂತರ್ಜಾಲ

ಮನ ಮಂಥನ:

* ಅವಸರದಿಂದ ಮಾಡಿದ ಕೆಲಸಗಳು ಮತ್ತು ತಾಳ್ಮೆಯಿಂದ ಮಾಡಿದ ಕೆಲಸಗಳಲ್ಲಿನ ವ್ಯತ್ಯಾಸವನ್ನು ಗುರುತಿಸು. ಅದರ ಪರಿಣಾಮವನ್ನು ತರಗತಿಯಲ್ಲಿ ಹಂಚಿಕೊ.

ಬಡಗಿಗಳೂ ಆನೆಯೂ

– ದೇವುಡು ನರಸಿಂಹಶಾಸ್ತ್ರಿ

ದೇವುಡು (1886 ಡಿಸೆಂಬರ್ 29 – 1962 ಅಕ್ಟೋಬರ್ 27) ಎಂದೇ ಖ್ಯಾತರಾದ ದೇವುಡು ನರಸಿಂಹಶಾಸ್ತ್ರಿಯವರು ಕನ್ನಡದ ಖ್ಯಾತ ವಿದ್ವಾಂಸ ಮತ್ತು ಸಾಹಿತಿಗಳಲ್ಲೊಬ್ಬರು. ಅವರು ಅನೇಕ ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಕಾದಂಬರಿಗಳನ್ನು, ಮಕ್ಕಳ ಸಾಹಿತ್ಯವನ್ನು ಬರೆದಿದ್ದಾರೆ.

ಕಪಿಲಾನದಿಯ ತೀರದಲ್ಲಿ ಒಂದು ಕಾಡು. ಬಡಗಿಗಳು ಅಲ್ಲಿ ಮರವನ್ನು ಕೊಯ್ಯುತ್ತಿದ್ದರು. ಎಲ್ಲರೂ ತಮ್ಮ ತಮ್ಮ ಪಾಡಿಗೆ ತಾವು ತಾವು ಕೆಲಸ ಮಾಡುತ್ತಿದ್ದರು. ಆಗ ಆನೆಯು ಘೀಳಿಟ್ಟಂತೆ ಆಗಲು

ಎಲ್ಲರಿಗೂ ಹೆದರಿಕೆ ಆಯಿತು. ಮತ್ತು ಒಂದು ಸಲ ಹಾಗೆಯೇ ಅದೇ ಶಬ್ದ ಕೇಳಿಸಿತು. ಅಲ್ಲಿಯುವರು ಅಲ್ಲಲ್ಲೇ ಅಡಗಿಕೊಂಡು ಬಿಟ್ಟರು.

ಒಂದು ದೊಡ್ಡ ಕೊಂಬಿನಾನೆ ಕುಂಟುತ್ತಾ ಬಂತು. ಅದಕ್ಕೆ ಬಲಗಡೆಯ ಮುಂಗಾಲು ಮುಂದಕ್ಕೆ ಇಡುವುದಕ್ಕೂ ಆಗದಷ್ಟು ಗಾತ್ರ ಬಾತುಕೊಂಡಿತ್ತು. ಬಲು ಕಷ್ಟದಿಂದ ಆನೆಯು ಆ ಬಡಗಿಗಳು ಇರುವ ಜಾಗಕ್ಕೆ ಬಂತು. ಇನ್ನು ಮುಂದೆ ಹೋಗಲಾರದೆ ಮಲಗಿಕೊಂಡು ನೋವಿನಿಂದ ನರಳುತ್ತಿತ್ತು.

ಆನೆಯು ಬಾಧೆ ಪಡುತ್ತಿರುವುದು ಬಡಗಿಗಳಿಗೆ ತಿಳಿಯಿತು. ಮನಸ್ಸು ತಾಳಲಾರದೆ 'ಆದುದು ಆಗಲಿ.' ಎಂದು ಅವಿತಿದ್ದವನು ಆನೆಯ ಬಳಿಗೆ ಹೋದನು. ಅವನು ಹತ್ತಿರ ಬಂದರೂ ಆನೆಯು ಏನೂ

ಮಾಡಲಿಲ್ಲ. ಅವನು ಧೈರ್ಯವಾಗಿ, ಇನ್ನೂ ಹತ್ತಿರಕ್ಕೆ ಹೋದನು. ಆನೆಯು ಅವನ ಮುಖವನ್ನು ನೋಡಿ, ಕಣ್ಣೀರು ಹಾಕಿತು. ಅದನ್ನು ನೋಡಿದರೆ,"ನೀನು ಬಂದು ಏನಾಗಿದೆ ನೋಡು." ಎಂದು ಹೇಳುವ ಹಾಗೆ ತೋರಿತು. ಅದೂ ಒಂದು ಸಲ ನರಳಿತು. ಇನ್ನು ಸೈರಿಸುವುದು ಅಸಾಧ್ಯವಾಗಿ, ಊದಿದ ಕಾಲಿನ ಬಳಿಗೆ ಹೋದನು. ಎಡಗೈಯಲ್ಲಿ ಜೀವವನ್ನು ಹಿಡಿದುಕೊಂಡು, ಆ ಕಾಲನ್ನು ಹಿಡಿದು ನೋಡಿದ. ಸುಮಾರು ಒಂದು ಗೇಣುದ್ದ, ಒಂದು ಹೆಬ್ಬೆರಳು ದಪ್ಪ ಇರುವ ಸಿಬಿರು ಚುಚ್ಚಿಕೊಂಡಿರುವುದು ಕಂಡು ಬಂತು.

ಆದರಿಂದ ಆನೆಗೆ ಎಷ್ಟು ನೋವಾಗಿರಬಹುದೋ ಎಂದು ಅವನಿಗೆ ಕಣ್ಣಿನಲ್ಲಿ ನೀರು ಬಂತು. ಕೂಡಲೇ ತನ್ನವರನ್ನು ಕರೆದು ಬಿಸಿ ನೀರು ಕಾಯಿಸಿ

ತರಿಸಿ ಅದನ್ನು ಹಾಕಿ ತೊಳೆದನು. ಆನೆಗೂ ಕೊಂಚ ಹಿತವಾಗಿ, ಒಂದು ನಿಟ್ಟುಸಿರು ಬಿಟ್ಟಿತು. ಹಾಗೇ ಇನ್ನೂ ಸ್ವಲ್ಪ ಬಿಸಿನೀರು ಹಾಕುತ್ತಿದ್ದು, ಕೊನೆಗೆ ಆ ಸಿಬಿರನ್ನು ಕಿತ್ತುಬಿಟ್ಟನು. ಸಿಬಿರು ಈಚೆಗೆ ಬಂದು ಬಿಟ್ಟಿತು. ಆ ವೇಳೆಗೆ ಧೈರ್ಯಗೊಂಡು ಎಲ್ಲರೂ ಅಲ್ಲಿಗೆ ಬಂದರು. ಆ ಗಾಯದಲ್ಲಿದ್ದ ಕೀವು ರಕ್ತವನ್ನು ಚೆನ್ನಾಗಿ ತೊಳೆದು ಅದಕ್ಕೆ ತಮ್ಮಲ್ಲಿದ್ದ ಔಷಧಿಯನ್ನು ಹಾಕಿದರು.

ಆ ಹುಣ್ಣು ಆರುವುದಕ್ಕೆ ಒಂದು ತಿಂಗಳು ಹಿಡಿಯಿತು, ಅದುವರೆಗೂ ಆನೆಯು ಅಲ್ಲಿಯೇ ಇತ್ತು. ಬಡಗಿಗಳೂ ಅದಕ್ಕೆ ಅಲ್ಲಿಗೇ ಸೊಪ್ಪು ತಂದು ಹಾಕುತ್ತಿದ್ದರು. ಜೊತೆಗೆ 'ಪಾಪ!' ಎಂದು ತಾವು ತಂದಿದ್ದ ಬುತ್ತಿಂಯುಲ್ಲೂ ಕೊಂಚಕೊಂಚ ಊಟವನ್ನು ಕೊಡುತ್ತಿದ್ದರು. ಆನೆಗೆ ಬಡಗಿಗಳಲ್ಲಿ ಪ್ರೀತಿ

ಹುಟ್ಟಿತು. ಆನೆಯು ಅವರನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ಉಳಿದು ಬಿಟ್ಟಿತು. ಅವರಿಗಾಗಿ ಏನಾದರೂ ಕೆಲಸ ಮಾಡಿಕೊಡಬೇಕೆಂದು ದಿಮ್ಮಿಗಳನ್ನು ಸಾಗಿಸುವುದು, ಮರ ಎಳೆಯುವುದು ಮೊದಲಾದ ಕೆಲಸಗಳನ್ನು ಮಾಡಿಕೊಡುತ್ತಿತ್ತು. ಬಡಗಿಗಳ ಮಕ್ಕಳು ಯಾವತ್ತಾದರೂ ಬಂದರೆ ಅವರನ್ನು ಬೆನ್ನಿನ ಮೇಲೆ ಕೂಡಿಸಿಕೊಂಡು ಓಡಾಡಿಸುತ್ತಿತ್ತು. *

ಮೂಲ: https://chilume.com/?p=26637

ಮನ ಮಂಥನ:

* ಕಷ್ಟದಲ್ಲಿರುವ ಪ್ರಾಣಿಗಳಿಗೆ ಸಹಾಯ ಮಾಡಿದ್ದರೆ ಆ ಪ್ರಸಂಗವನ್ನು ಕಥೆ ರೂಪದಲ್ಲಿ ಬರೆದು ತರಗತಿಯಲ್ಲಿ ಹಂಚಿಕೊ.

'Chako Chaki' ಇಂಗ್ಲೀಷ್ ಕಥೆಯ ಕನ್ನಡ ಅನುವಾದ

ಚಾಕೋ ಚಾಕಿ

– ಅನು: ಸಂಗಮೇಶ ಎಮ್.

ಆಹಾರ–ಜೀವದ ಜೀವಾಳ ಪಾಠಕ್ಕೆ ಪೂರಕ

ಒಮ್ಮೆ, ಒಂದು ಸುಂದರವಾದ ಕಾಡಿನಲ್ಲಿ, ಗಂಡು ಗುಬ್ಬಚ್ಚಿ ಮತ್ತು ಹೆಣ್ಣು ಗುಬ್ಬಚ್ಚಿ ಸುಖವಾಗಿ ಜೀವಿಸುತ್ತಿದ್ದವು. ಅವು ಒಂದು ಕೊಂಬೆಯಿಂದ ಇನ್ನೊಂದಕ್ಕೆ ಕೊಂಬೆಗೆ ಸ್ವಾತಂತ್ರ್ಯದಿಂದ ಹಾರಾಡುತ್ತಿದ್ದವು. ತಂಡವಾಗಿ ಅವು ತಮಗಾಗಿ ಒಂದು ಗೂಡು ನಿರ್ಮಿಸಿಕೊಂಡು ತಮ್ಮ ಮನೆಯನ್ನು

ಸಿದ್ಧಪಡಿಸಿಕೊಂಡವು.

ಒಂದು ದಿನ, ಹೆಣ್ಣು ಗುಬ್ಬಚ್ಚಿ ಅಕ್ಕಿ ತಂದರೆ, ಗಂಡು ಗುಬ್ಬಚ್ಚಿ ಸೊಪ್ಪನ್ನು ತಂದಿತು. ಹೆಣ್ಣು ಗುಬ್ಬಚ್ಚಿ ನೀರನ್ನು ತುಂಬಿಸಲು ಹೋದಾಗ, ಗಂಡು ಗುಬ್ಬಚ್ಚಿ ಅಕ್ಕಿ ಮತ್ತು ಸೊಪ್ಪಿನಿಂದ ಮಾಡಿದ ಭಾರತೀಯ ಭಕ್ಷ್ಯವಾದ ಖಿಚಡಿಯನ್ನು ಬೇಯಿಸಿದನು. ಅವಳು ಅವನಿಗೆ ಕಾಯಲು ಹೇಳಿದಳು. ಅವರು ಒಟ್ಟಿಗೆ ಊಟವನ್ನು ಆನಂದಿಸುತಿದ್ದರು. ಆದರೆ ಅವನು ಈ ಸಲ ಎಲ್ಲಾ ಖಿಚಡಿಯನ್ನು ತಾನೇ ತಿಂದು ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡನು.

ಹೆಣ್ಣು ಗುಬ್ಬಚ್ಚಿ ಹಿಂತಿರುಗಿ ನೋಡಿದಾಗ ಒಂದು ಕಾಳು ಖಿಚಡಿ ಕೂಡ ಉಳಿದಿರಲಿಲ್ಲ. ಗಂಡು ಗುಬ್ಬಚ್ಚಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಲಗಿದ್ದ ನನಗೆ ಏನಾಯಿತೋ ಗೊತ್ತಿಲ್ಲ ಎಂದು ಸುಳ್ಳು ಹೇಳಿದ.

ಅಸಮಾಧಾನ ಮತ್ತು ಹಸಿವಿನಿಂದ, ಹೆಣ್ಣು ಗುಬ್ಬಚ್ಚಿ ಅಳಲು ಪ್ರಾರಂಭಿದಳು. ಅವಳು ಹಸುವಿನಿಂದ ಸಾಕಷ್ಟು ಸುಸ್ತಾಗಿದ್ದರಿಂದ, ರಾಜನನ್ನು ನೋಡಲು ಹೋದಳು. ರಾಜನು ಅವಳ ಕಥೆಯನ್ನು ಕೇಳಿದನು. ನಂತರ ಗಂಡು ಗುಬ್ಬಚ್ಚಿಯನ್ನು ಕರೆದನು. ಅವನ ಕಣ್ಣುಗಳ ಮೇಲಿನ ಕವಚವನ್ನು ತೆಗೆಯುವಂತೆ ಹೇಳಿದನು.

ಗಂಡು ಗುಬ್ಬಚ್ಚಿಯ ಮುಖದ ಮೇಲೆ ಇನ್ನೂ ಕೆಲವು ಖಿಚಡಿಯ ಕಾಳುಗಳು ಇರುವುದನ್ನು ಗಮನಿಸಿದ. ಅದನ್ನು ಅವನೇ ತಿಂದಿದ್ದಾನೆಂದು ರಾಜನು ತಿಳಿದನು. ಹಾಗಾಗಿ, ಅದರ ಶಿಕ್ಷೆಯಾಗಿ, ರಾಜನು ಗಂಡು ಗುಬ್ಬಚ್ಚಿಗೆ ಸ್ವಲ್ಪ ಅಕ್ಕಿ ಮತ್ತು ಬೇಳೆಯನ್ನು ತೆಗೆದುಕೊಂಡು ಅದೇ ಊಟವನ್ನು ಹೆಣ್ಣು ಗುಬ್ಬಚ್ಚಿಗೆ ಬೇಯಿಸಲು ಆದೇಶಿಸಿದನು.

ಖಿಚಡಿ ಅಡುಗೆ ಮಾಡುವಾಗ ಗಂಡು ಗುಬ್ಬಚ್ಚಿಗೆ ತನ್ನ ದುರಾಸೆಯು ಅರಿವಾಯಿತು. ಅವನು ತನ್ನ ಸ್ನೇಹಿತ ಮನೆಗೆ ಬರುವವರೆಗೆ ಕಾಯಬೇಕಾಗಿತ್ತು ಅಂತ ಅಂದುಕೊಂಡ. ಹೆಣ್ಣು ಗುಬ್ಬಚ್ಚಿ ತಿಂದ ನಂತರ, ಅವರು ಸಂಧಾನ ಮಾಡಿಕೊಂಡು ಯಾವಾಗಲೂ ಊಟ ಮಾಡುವ ಮೊದಲು ಪರಸ್ಪರ ಕಾಯುವುದಾಗಿ ಭರವಸೆ ನೀಡಿದವು.

ನಂತರ ಗುಬ್ಬಚ್ಚಿಗಳು ಸಂತೋಷವಾಗಿ ಬದುಕಿದವು. *

ಮನ ಮಂಥನ:

* ನಿನ್ನ ಪಾಲಿನ ವಸ್ತು ಅಥವಾ ತಿಂಡಿಯನ್ನು ತೆಗೆದುಕೊಂಡಿದ್ದರೂ, ತೆಗೆದುಕೊಂಡಿಲ್ಲ ಎಂದು ಸುಳ್ಳು ಹೇಳಿದರೆ, ಆಗ ನಿನ್ನ ಮನಸ್ಸಿನಲ್ಲಾಗುವ ತೊಳಲಾಟದ ಅನುಭವವನ್ನು ತರಗತಿಯಲ್ಲಿ ಹಂಚಿಕೊ.

– ಅಂತರ್ಜಾಲ

There was once a male sparrow[1] and female sparrow that lived together happily. They jumped from one branch to another and flew freely. With

ಹೊಸಪದಗಳು

1. Sparrow (ಸ್ಪ್ಯಾರೋ) – **ಗುಬ್ಬಚ್ಚಿ**

teamwork, they built a nest for themselves and made their home ready.

One day, the female sparrow brought rice and the male sparrow brought lentils. He cooked Khichdi – an Indian dish made from rice and lentils[2] – while she went to refill the water. She told him to wait and they would enjoy the meal together but he ate all the Khichdi and tied a cloth over his eyes.

When the female sparrow returned, she saw that there was

ಹೊಸಪದಗಳು:

2. Lentil (ಲೆಂಟಿಲ್) - ದ್ವಿದಳ ಧಾನ್ಯ

not a single grain[3] of Khichdi left. The male sparrow lied and said he did not know what had happened, as he had been sleeping with his eyes covered.

Upset and hungry, the female sparrow started to cry. As she was worried[4] and quite unsettled[5], she went to see the king. The king heard her side of the story and then called the male sparrow. He asked him to remove

ಹೊಸಪದಗಳು:

3. **Grain** (ಗ್ರೇನ್) - ಧಾನ್ಯ/ಕಾಳು/ಬೀಜ
4. **Worried** (ವರಿಡ್) - ಆತಂಕಗೊಂಡ/ ಚಿಂತೆಯಲ್ಲಿರುವ
5. **Settle** (ಸೆಟ್ಲ್) - ನೆಲೆಸು/ನೆಲೆಗೊಳಿಸು/ಸ್ಥಿರತೆ/ ಒಂದಡೆ ನಿಲ್ಲು

the cover on his eyes.

The king noticed that a few grains of Khichdi were still on the male sparrow's face and knew that he had eaten it. So, as a punishment, the king ordered the male sparrow to get some rice and lentils and cook the same meal again for the female sparrow.

While cooking the Khichdi, the male sparrow realized[6] that he had been

ಹೊಸಪದಗಳು

6. Realiz (ರಿಯಲೈಸ್) **- ಗ್ರಹಿಸು/ತಿಳಿದುಕೊ/ ಅರಿತುಕೊ/ಅರ್ಥಮಾಡಿಕೊ**

greedy[7]. He should have waited for his friend to get home. After the female sparrow had eaten, they made up and promised to always wait for each other before having a meal. The sparrows lived happily ever after. *

ಮೂಲ: ಅಂತರ್ಜಾಲ

ಹೊಸಪದಗಳು

7. Greedy (ಗ್ರೀಡಿ) **- ಆಸೆಬುರುಕ/ಹೊಟ್ಟೆಬಾಕ**

ಕಳ್ಳ ಬೆಕ್ಕು

– ನೀ.ರೇ. ಹಿರೇಮಠ

ಆಕರ: ಚಂದಿರನೇತಕೆ ಓಡುವನಮ್ಮಾ
ಮಕ್ಕಳ ಕವನಗಳು

ಬೆಕ್ಕೇ ಬೆಕ್ಕೇ ಬಂಗಾರಿ
ಓಡುವೆ ಏತಕೆ ಒಯ್ಯಾರಿ?
ಕೊರಳಲಿ ಗಡಿಗೆಯ ಸರವೇಕೆ?
ಮೊಸರದು ಮೆತ್ತಿದ ಮುಖವೇಕೆ?

ಮೊಸರನು ಕದಿಯಲು ಹೋಗಿದ್ದೆ
ಗಡಿಗೆಲಿ ಮೊಗವನು ತೂರಿದ್ದೆ
ದೊಣ್ಣೆಯ ಪೆಟ್ಟನು ತಿಂದಿದ್ದೆ
ಗಡಿಗೆಯ ಕಂಟವ ಗಳಿಸಿದೆ

ಕಂಠಕೆ ಕಂಟದ ಸರಸವಾಯ್ತು
ಮೊಸರಿನ ಮಜ್ಜನ ಮುಖಕಾಯ್ತು
ಬೇಟೆಯಾಡಲು ಮರೆತಿರುವೆ
ಕದಿಯುವುದೊಂದೇ ಕಲಿತಿರುವೆ

ಅಲ್ಲವೆ ಹೇಳೇ ಸೋಮಾರಿ
ನಾಚಿಕೆ ಇಲ್ಲವೆ ಅಲೆಮಾರಿ.

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಸಂಪರ್ಕ ಮಾಹಿತಿ:
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
 # 76,'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,
ಶಿವಗಿರಿ, ಧಾರವಾಡ 580 007
ಮೊ: 99866 61055
dhwanitrust@gmail.com
www. dhwanitrust.org

ಗಮನಿಸಿ: ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.